24	ರಾಯಚೂರು	878	401
25	ರಾಮನಗರ	294	187
26	ಶಿವಮೊಗ್ಗ	753	413
27	ತುಮಕೂರು	870	511
28	ಉಡುಪಿ	354	227
29	ಉತ್ತರ ಕನ್ನಡ	626	322
30	ಯಾದಗಿರಿ	773	442
	ಒಟ್ಟು	25168	13340

ಕುಡಿಯುವ ನೀರಿನ ಸೌಲಭ್ಯ

5352 (5432); ಶ್ರಿಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ್ (ನಿಪ್ಪಾಣಿ)

ಅ) ನಿಪ್ಪಾಣಿ ನಗರದಲ್ಲಿ ಏಷಿಯನ್ ಡೆವಲಪ್‌ಮೆಂಟ್ ಬೋರ್ಡ್ ವತಿಯಿಂದ ಕುಡಿಯುವ ನೀರಿನ ಸೌಲಭ್ಯವನ್ನು ಕಲ್ಪಿಸುವ ಕಾಮಗಾರಿಯು ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಯಾವ ಕ್ರಮವನ್ನು ಕೈಕೊಳ್ಳಲು ಸರ್ಕಾರ ನಿರ್ಧರಿಸಿದೆ; ಹೊಣೆಗಾರರು ಯಾರು;

ಇ) ಗುತ್ತಿಗೆದಾರರಿಗೆ ಈವರೆಗೆ ಬಿಡುಗಡೆಗೊಳಿಸಿದ ಅನುದಾನವೆಷ್ಟು; ಬಿಡುಗಡೆ ಮಾಡಬೇಕಾಗಿರುವ ಅನುದಾನವೆಷ್ಟು; ಕಾಮಗಾರಿಯ ಅಂದಾಜು ವೆಚ್ಚವೆಷ್ಟು;

ಈ) ಗುತ್ತಿಗೆದಾರರಿಗೆ ಎಷ್ಟು ಬಾರಿ ವಿಸ್ತರಣೆ ಮಾಡಲಾಗಿದೆ; ಅಂತಿಮ ಗಡವು ನೀಡಲಾಗಿದೆಯಾ; ಅದರಿಂದ ದಂಡದ ರೂಪದಲ್ಲಿ ಸರ್ಕಾರಕ್ಕೆ

ಸಂದಾಯವಾಗಿರುವ ಹಣವೆಷ್ಟು (ದಿನಾಂಕದೊಂದಿಗೆ ವಿವರ ನೀಡುವುದು)

ಉ) ಸ್ಥಗಿತಗೊಂಡಿರುವ ಕಾಮಗಾರಿಯನ್ನು ಆರಂಭಿಸುವ ಉದ್ದೇಶವಿದೆಯೇ; ಹಾಗಿದ್ದಲ್ಲಿ ಯಾವಾಗ ಮತ್ತು ಹೇಗೆ ಪ್ರಾರಂಭಿಸಲಾಗುವುದು;

ಶ್ರೀ ವಿನಯಕುಮಾರ್ ಸೊರಕೆ (ಮಾನ್ಯ ನಗರಾಭಿವೃದ್ಧಿ ಸಚಿವರು)

ಅ) ಬಂದಿದೆ.

ಆ) ವಿಷ್ಣನ್ ಅಭಿವೃದ್ಧಿ ಬ್ಯಾಂಕ್ (ಎ.ಡಿ.ಬಿ) ನೆರವಿನ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮ (ಎನ್.ಕೆ.ಯು.ಎಸ್.ಐ.ಪಿ) ದಡಿ ನಿಪ್ಪಾಣಿ ನಗರಕ್ಕೆ ನೀರು ಸರಬರಾಜು ಸುಧಾರಣೆ ಕಾಮಗಾರಿಯನ್ನು ರೂ. 13.11 ಕೋಟಿ ಮೊತ್ತಕ್ಕೆ ದಿನಾಂಕ: 11.05.2010 ರಲ್ಲಿ ಗುತ್ತಿಗೆಯನ್ನು ಮೆ. ಟಾಪಿ ಪ್ರೀಸ್ಟ್ರಸ್ಡ್ ಪ್ರಾಡೆಕ್ಟ್ ಲಿ., ಜಲಗಾಂವ್ ರವರಿಗೆ ಗುತ್ತಿಗೆ ನೀಡಲಾಗಿದೆ.

ಗುತ್ತಿಗೆದಾರರು ಕಾಮಗಾರಿಯನ್ನು ವಿನಾಕಾರಣ ಅತ್ಯಂತ ನಿಧಾನಗತಿಯಿಂದ ಕೈಗೊಂಡ ಕಾರಣ, ಕಾಮಗಾರಿ ಪೂರ್ಣಗೊಳಿಸದೆ ಇರುವುದರಿಂದ ಗುತ್ತಿಗೆಯನ್ನು ದಿನಾಂಕ: 17.07.2015 ರದ್ದುಪಡಿಸಲಾಗಿದೆ. ಕಾರಣ ಪ್ರಸ್ತುತ ಬಾಕಿ ಕಾಮಗಾರಿಗಳು ತಾತ್ಕಾಲಿಕವಾಗಿ ಸ್ಥಗಿತಗೊಂಡಿರುತ್ತದೆ.

ಬಾಕಿ ಕಾಮಗಾರಿಗಳನ್ನು ಶೀಘ್ರವಾಗಿ ಪೂರ್ಣಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.

ಈ ವಿಳಂಬಕ್ಕೆ ಗುತ್ತಿಗೆದಾರರಾದ ಮೆ. ಟಾಪಿ ಪ್ರಿಸ್ಟ್ರೆಸ್ಡ್ ಪ್ರಾಡೆಕ್ಟ್ ಲಿ., ಜಲಗಾಂವ್, ಇವರೆ ನೇರ ಹೊಣೆಗಾರರಾಗಿರುತ್ತಾರೆ. ಆದುದರಿಂದ, ಇವರ ಗುತ್ತಿಗೆಯನ್ನು ರದ್ದು ಪಡಿಸಲಾಗಿದೆ. ಗುತ್ತಿಗೆದಾರರು ನೀಡಿದ ಬ್ಯಾಂಕ್ ಗ್ಯಾರಂಟಿಯನ್ನು ನಗದೀಕರಿಸಲಾಗಿದೆ ಹಾಗೂ ಬಾಕಿ ಉಳಿದ

ಕಾಮಗಾರಿಗಳನ್ನು ಕೈಗೊಳ್ಳಲು ತಗಲುವ ಹೆಚ್ಚುವರಿ ವೆಚ್ಚವನ್ನು ಮೇಲ್ಕಂಡ ಗುತ್ತಿಗೆದಾರರಿಂದ ವಸೂಲಾತಿ ಮಾಡಲಾಗುವುದು.

ಇ) ಈ ಕಾಮಗಾರಿಯ ಯೋಜನಾ ಮೊತ್ತವು ರೂ. 13.11 ಕೋಟಿಗಳಾಗಿದ್ದು, ಈ ವರೆಗೂ ಗುತ್ತಿಗೆದಾರರಿಗೆ ರೂ. 10.83 ಕೋಟಿ ಬಿಡುಗಡೆಯಾಗಿರುತ್ತದೆ.

ಗುತ್ತಿಗೆದಾರರಿಗೆ ಬಿಡುಗಡೆ ಮಾಡಬೇಕಾಗಿರುವ ಮೊತ್ತದ ಬಗ್ಗೆ ಅಂತಿಮ ಬಿಲ್ಲು ಸಿದ್ದಪಡಿಸಲಾಗುತ್ತಿದೆ. ಪ್ರಸ್ತುತ ಬಾಕಿ ಕಾಮಗಾರಿಗಳ ಮೊತ್ತವನ್ನು ಚಾಲ್ತಿ ದರಪಟ್ಟಿ ಪ್ರಕಾರ ರೂ. 4.54 ಕೋಟಿ ಎಂದು ಅಂದಾಜಿಸಲಾಗಿದೆ.

ಈ) ಗುತ್ತಿಗೆ ಕಾಲಾವಧಿ ನಂತರ ಈ ಕೆಳಕಂಡಂತೆ ಒಟ್ಟು 8 ಬಾರಿ ಗುತ್ತಿಗೆ ಅವಧಿಯನ್ನು ವಿಸ್ತರಿಸಲಾಗಿದೆ;

- ಮೊದಲನೆಯ ವಿಸ್ತರಣೆ: 10.08.2012
- ಎರಡನೇ ವಿಸ್ತರಣೆ: 28.02.2013
- ಮೂರನೇ ವಿಸ್ತರಣೆ: 31.08.2013
- ನಾಲ್ಕನೇ ವಿಸ್ತರಣೆ: 28.02.2014
- ಐದನೇ ವಿಸ್ತರಣೆ: 31.07.2014
- ಆರನೇ ವಿಸ್ತರಣೆ: 30.11.2014
- ಏಳನೇ ವಿಸ್ತರಣೆ: 28.02.2015
- ಎಂಟನೆ ವಿಸ್ತರಣೆ: 30.06.2015

ಗುತ್ತಿಗೆ ನಿಯಮಾವಳಿ ಪ್ರಕಾರ ಗುತ್ತಿಗೆ ಮೊತ್ತದ ಶೇ. 10% ರಷ್ಟು ಒಟ್ಟು ರೂ. 1.31 ಕೋಟಿಗಳಷ್ಟು ದಂಡವನ್ನು ಗುತ್ತಿಗೆದಾರರಿಗೆ ವಿಧಿಸಲಾಗಿದೆ.

ಇದೂವರೆಗೂ ಆರ್.ಎ. ಬಿಲ್ಲುಗಳಲ್ಲಿ ಕಡಿತಗೊಳಿಸಲಾಗಿದೆ. ವಿವರ ಕೆಳಗಿನಂತಿದೆ.

ಆರ್. ಎ. ಬಿಲ್ಲು	ದಿನಾಂಕ	ಮೊತ್ತ (ರೂ. ಲಕ್ಷ)
1	15.04.2011	1587500
2	10.11.2011	1797750
3	30.12.2011	364250
	ಒಟ್ಟು	**3749500**

ಹಾಗೂ ಬಾಕಿ ದಂಡ ಮೊತ್ತ ರೂ. 93.505 ಲಕ್ಷ ಮೊತ್ತವನ್ನು ಗುತ್ತಿಗೆದಾರರಿಂದ ಪಡೆಯಲಾಗಿದ್ದ ಬ್ಯಾಂಕ್ ಗ್ಯಾರಂಟಿಯನ್ನು ದಿನಾಂಕ: 21.07.2015 ರಂದು ನಗದೀಕರಿಸಲಾಗಿದೆ.

ಊ) ಹೌದು. ಸ್ಥಗಿತಗೊಂಡಿರುವ ಕಾಮಗಾರಿಯನ್ನು ಆರಂಭಿಸಬೇಕಾಗಿದೆ. ಬಾಕಿ ಕಾಮಗಾರಿಗಳ ಅಂದಾಜು ಪಟ್ಟಿಯನ್ನು ತಯಾರಿಸಿದ ನಂತರ ಶೀಘ್ರವಾಗಿ ಪೂರ್ಣಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.

ಅಕ್ರಮ ನಿವೇಶನಗಳು

5357 (5924); ಶ್ರೀ ಕೃಷ್ಣಾರೆಡ್ಡಿ ಎಂ. (ಚಿಂತಾಮಣಿ)

ಅ) ಚಿಂತಾಮಣಿ ತಾಲ್ಲೂಕಿನ ಕಸಬಾ ಹೋಬಳಿಯ ಕನಂಪಲ್ಲಿ ಗ್ರಾಮದ ಸರ್ಕಾರಿ ಹುಲ್ಲುಬನ್ನಿ ಖರಾಜು ಜಮೀನನ್ನು ಅಕ್ರಮ ದಾಖಲೆಗಳು ಸೃಷ್ಟಿಸಿ ನಗರ ಸಭೆಯಲ್ಲಿ ಖಾತೆ ಮಾಡಿರುವ ನಿವೇಶನಗಳನ್ನು ಸರ್ಕಾರಿ ನೌಕರರ ಗೃಹ ಮಂಡಳಿಯವರು ಸರ್ಕಾರಿ ನೌಕರರಿಗೆ ಮಾರಾಟ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಅವು ಯಾವುವು;